(SRI D. DEVARAJ URS)

amount of litre fee paid cannot also be levied and collected from the writ petitioners. The petitioners are therefore entitled to the refund of the litre fee' Health Cess and Education Cess levied and collected from the petitioners during the period of three years before the institution of these writ petitions. The High Court has further directed to make orders of refund on the petitioners filing particulars of the amounts collected from them during the aforesaid period of three years,

(c) In pursuance of the orders of the High Court the refund bills as and when produced are being processed,

SRI B. B. SAYANAK,—When the High Court of Karnataka has struck down the order of levying cess to the denatured spirit why the Government has not refunded the amount collected from the denatured spirit licencees ?

†SRI D. DEVARAJ URS.—We are going to refund.

SRI B. B. SAYANAK.—Through the denatured spirit licencees have produced the refund bills to the Government why the Government has not taken immediate action ?

SRI D. DEVARAJ URS —The nature of verification is such it involves some time. It is being processed and whatever money is due according to the High Court order. We are going to refund.

SRI B. B. SAYANAK.—When the High Court has said that this rule is ultra vires why the Government is not going to refund the money to all the licencees from whom it has collected the cess ?

SRI D. DEVARAJ URS —This is with refence to those who went to High Court. It may be made applicable to others. Whoever has claims according to the High Court order let him submit the Bill.

* *Prevention of sale of adulterated toddy and illicit drink*

160. SRI T. R. SHAMANNA (Fort).— Will the Chief Minister be pleased to state.—

(a) the excise revenue receipts anticipated and actually collected in the Budget year 1973-74

(b) the excise revenue receipts anticipated in the Budget year 1974—75 and the revenue realisable as per tender bids for 1974-75;

(c) the effective steps taken to check the growth of —

(i) Illicit Drink, and
(ii) Sale of adulterated toddy etc. ?

SRI D. DEVARAJ URS. (Chief Minister).—

(*a*)	Anticipated	Rs.	29,32,30,000
	Actual	Rs.	87,58,35,075
(*b*)	Anticipated	Rs.	38,00 00,000
	Actual	Rs.	45,00,00,000

(*c*) Government are continuously reviewing the procedure in order to prevent the sale of adulterated toddy and illicit drinking. If there is any violation of the provisions of the Excise Act and Rules such violation will be dealt with severely.

ಶ್ರೀ ಟಿ. ಆರ್. ಶಾಮಣ್ಣ.—(ಅ) ಪಶ್ನೆಗೆ ಕೊಟ್ಟಿರುವ ಉತ್ತರದಂತೆ ಮತ್ತು (ಆ) ಪ್ರಶ್ನೆಯ ಉತ್ತರದಂತೆ ಉತ್ಪತ್ತಿ ಜಾಸ್ತಿಯಾಗಿರುವುದಕ್ಕೆ ಕಾರಣ ಕುಡಿಯುವವರ ಸಂಖ್ಯೆ ಹೆಚ್ಚಾಗಿರುವುದೋ ಅಥವ ಅಧಿಕಾರಿಗಳು ದಕ್ಷತೆಯಿಂದ ಕೆಲಸಮಾಡಿ ಬರಬೇಕಾದ ಹಣ ವಸೂಲು ಮಾಡಿರುವುದೋ ?

ಶ್ರೀ ಡಿ. ದೇವರಾಜ ಅರಸ್.—ಎರಡೂ ಇದೆ. ಕುಡಿಯುವವರ ಸಂಖ್ಯೆ ಜನಸಂಖ್ಯೆ ಹೆಚ್ಚಿದಂತೆ ಹೆಚ್ಚಿದೆ ಮತ್ತು ಅಧಿಕಾರಿಗಳ ದಕ್ಷತೆ ಕೂಡ ಹೆಚ್ಚಾಗಿದೆ.

ಶ್ರೀ ಟಿ. ಆರ್, ಶಾಮಣ್ಣ.—ಈಗ ಕಳ್ಳಬಟ್ಟಿಯಿಂದ ತಯಾರು ಮಾಡಿ ಮಾರುವ ಮಾದಕ ಪದಾರ್ಥ ಹೆಚ್ಚಾಗಿದೆ. ಅದನ್ನು ತಡೆಗಟ್ಟುವುದರಲ್ಲಿ ಸರಕಾರ ವಿಫಲವಾಗಿದೆ ಎಂಬ ಶಂಕೆಯಿದೆ. ಇದರ ಬಗ್ಗೆ ಸರಕಾರದ ಉತ್ತರವೇನು ?

ಶ್ರೀ ಡಿ. ದೇವರಾಜ ಅರಸ್,—ಮಾನ್ಯ ಸದಸ್ಯರ ಶಂಕೆ ನಿಜವಾಗಿದ್ದರೆ ಇಷ್ಟು ಹಣ ಬರುತ್ತಿರಲಿಲ್ಲ The very fact that Governmennt have got so much revenue from year to year is an indication to show that we are effectively controlling this illicit distillation. ಈಗ ಇಲ್ಲಿ ಸಿಟ್ ಡಿಸ್ಟಿಲೇಷನ್ ಕಡಿಮೆಯಾಗುತ್ತಿದೆ. It is a known fact.

ಶ್ರೀ ಕಾಗೋಡು ತಿಮ್ಮಪ್ಪ.—ಹೆಂಡ ಮತ್ತು ಸಾರಾಯಿ ಮಾರಾಟ ಮಾಡುವ ಕಡೆ ಅಸಹ್ಯವಾಗು ವಂತಹ ವಾತಾವರಣವಿದೆ. ಆದುದರಿಂದ ಇದಕ್ಕೆ ಸಾರಮ್ಸ್‌ಫಿಕ್ಸ್ ಮಾಡಿ ಸರಿಯಾದ ರೀತಿಯಲ್ಲಿ ಶುಚಿ ಯಾಗಿ ಅಂಗಡಿ ಇಡಲು ಆದಕ್ಕೆ ತಕ್ಕಂತೆ ಕಾನೂನು ತಿದ್ದುಪಡಿ ಮಾಡುವಿರಾ ?

SRI D. DEVARAJ URS.—I entirely agree with the hon. Member that the way in which we have been keeping these shops unbecomings I am sorry I could not so far invest more for improving these toddy shops But since this year I have given specifie orders to make a begining to improve them by spending a few lakhs rupees In some places experiment is going on to bottle the toddy. The shops are to be improved, the toddy is to be bottled, even shops are to be given face iift and kept olean. All these matters are engaging the attention of the Government and this year we have made just a beginning in this behalf.

ಶ್ರೀ ಜಿ. ರಾಮೇಗೌಡ.—ಕಲಬೆರಕೆ ಹೆಂಡ ಕುಡಿಯುತ್ತಿರುವುದರಿಂದ ಜನರ ಆರೋಗ್ಯ ಕೆಡುತ್ತಿದೆ. ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದನ್ನು ಮಾರಾಟ ಮಾಡುವುದು ಜನರು ಕುಡಿದು ಆರೋಗ್ಯ ಕೆಡಿಸಿಕೊಳ್ಳುವುದು ಗಮನಕ್ಕೆ ಬಂದಿದ್ದರೆ ಕಲಬೆರಕೆ ಹೆಂಡ ಮಾರಾಟ ಮಾಡುವುದನ್ನು ನಿಲ್ಲಿ ಸಲು ಪ್ರಯತ್ನ ನಡೆದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಬೇರೆ ರಾಜ್ಯಗಳ ವಿಚಾರ ಗಮನಿಸಿದರೆ ನಮ್ಮಲ್ಲಿ ಅಂಥ ಪ್ರಕರಣ ಗಳು ಕಡಿಮೆಯಾಗಿವೆ. ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿ ಮಾನ್ಯ ಸದಸ್ಯರು ಇದನ್ನು ಅರಿತಿರ ಬೇಕೆಂದು.

ಶ್ರೀ ಕೆ. ಹೆಚ್. ಹನುಮೇಗೌಡ.—ಈಚಲು ಮರ ವಂತ್ತು ತೆಂಗಿನ ಮರಗಳಲ್ಲಿ ಹೆಂಡ ಇಳಿಸುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಕೆಮಿಕಲ್ಸ್ ಉಪಯೋಗಿಸಿ ಹೆಂಡ ತಯಾರಿಸುವವರು ಎಂದು ಹೇಳುವರು ಇದನ್ನು ವೆರಿಫೈ ಮಾಡಲು ಸಾಧ್ಯವಿದೆ. ಎಷ್ಟು ಮರಗಳಿಂದ ಕಂಟ್ರಾಕ್ಟರು ಹೆಂಡ ಇಳಿಸುವರು, ಅದರಿಂದ ಎಷ್ಟು ಹೆಂಡ ಬರುವುದು ಎಷ್ಟು ಹುಚಿಕೆಯಾಗುವುದು ಎಂಬುದನ್ನು ನೋಡಿದರೆ ಕೆಮಿಕಲ್ಸ್ ಉಪಯೋಗಿಸುವುದು ಗೊತ್ತಾಗಿ ಇಲ್ಲಿಸಿಟ್ ಟಾಡಿ ತಪ್ಪಿಸಬಹುದು. ಇದನ್ನು ವೆರಿಫೈ ಮಾಡುವಿರಾ ?

ಶ್ರೀ ಡಿ ದೇವರಾಜ ಅರಸ್.—ಈಗ ಮರದ ಲೆಕ್ಕ ತಪ್ಪು ಕೊಡುತ್ತಿದ್ದಾರೆ, ಇದು ಗೆಮನಕ್ಕೆ ಬಂದಿದೆ, ಈಗಿರುವ ರೂಲ್ಸನ್ನು ತಿದ್ದುಪಡಿ ಮಾಡಬೇಕಾಯಿತು; ಮಧ್ಯವರ್ತಿ ಜನರು ಮರಗಳನ್ನು ತೆಗೆದುಕೊಳ್ಳುವುದು, ಸರಿಯಾದ ಲೆಕ್ಕ ಕೊಡದಿರುವುದು ನಡೆಯುತ್ತಿದೆಯೆಂದು ತಿಳಿದು, ಟ್ಯಾಕ್ಸ್ ಕಟ್ಟಬೇಕಾದ್ದನ್ನು ತಪ್ಪಿಸಿಕೊಳ್ಳಲು ಹೀಗೆ ಮಾಡುವರೆಂದು ತಿಳಿದ ತಕ್ಷಣ ಸ್ಥಳೀಯ ಶಾಸಕರ ಸಲಹೆ ಪಡೆದು ಟ್ಯಾಪರ್ಸ್‌ಗೆ ನೇರವಾಗಿ ಮರಗಳನ್ನು ಕೊಡುವಂತೆ ಮಾಡಿದ್ದೇವೆ. ಎರಡನೆಯದಾಗಿ ಹೈಡ್ರೋಕ್ಲೋರೈಡ್ ಎಂಬ ಕೆಮಿಕಲ್ಲನ್ನು ಮಿಕ್ಸ್ ಮಾಡುವುದು ಗಮನಕ್ಕೆ ಬಂದಿದೆ ಆದರೆ ಆದರ ಬಗ್ಗೆ ಕೆಮಿಕಲ್ ಅನಲಿಸಿಸ್ ಪಡೆಯುವ ವಿಚಾರದಲ್ಲಿ ದೊಡ್ಡ ಕಷ್ಟವಿದೆ, ಕೋರ್ಟುಗಳಿಗೆ ಈ ವಿಚಾರ ಹೋದರೆ ನಿಧಾನವಾಗುವುದು ಆದರೂ ಆದಷ್ಟು ಜಾಗ್ರತೆ ಇದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ,

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಕಲಬೆರಕೆ ಹೆಂಡ, ಕಳ್ಳಬಟ್ಟಿ ಸಾರಾಯಿ ಮೂಲಕ ಹರಿಜನರ ಕೇರಿಯಲ್ಲಿ ಜಾಸ್ತಿಯಾಗಿ ಆಗುತ್ತಿದೆ, ಇದನ್ನು ತಪ್ಪಿಸಿ ಅಂಗಡಿಗಳನ್ನು ಹರಿಜನರ ಕೇರಿಯಿಂದ ಎರಡು ಮೈಲಿಗಳ ದೂರದಲ್ಲಿ ತೆರೆಯಬೇಕೆಂದು ಸೂಚಿಸಿದ್ದೇವೆ. ಆದರೂ ಆದಕ್ಕೆ ಸಂಬಂಧಪಟ್ಟ ಇಲಾಖೆಯವರು ಗಮನ ಕೊಟ್ಟಲ್ಲ, ಆದುದರಿಂದ ಆದಕ್ಕೆ ಈಗಲಾದರೂ ಗಮನಕೊಡುವಿರಾ ?

ಶ್ರೀ ಡಿ. ದೇವರಾಜ ಅರಸ್.—ಎರಡು ಮೈಲಿ ದೂರವಿದ್ದರೆ ಅಲ್ಲಿಗೆ ಯಾರೂ ಬರುವುದಿಲ್ಲ. ಹರಿಜನರ ಕೇರಿಯ ಹತ್ತಿರವೇ ಅಂಗಡಿಗಳಿವೆಯೆಂದು ಹೇಳುವಂತಿಲ್ಲ. ಈಗ ಎಲ್ಲ ಜನರೂ ಮಿಕ್ಸಪ್ ಆಗಿರುವ ಸ್ಥಳಗಳಲ್ಲೂ ಇವೆ. ಅಲ್ಲೂ ಕೂಡ ಮದ್ಯದ ಅಂಗಡಿಗಳಿವೆ, ಹರಿಜನರ ಕೇರಿ ಒಂದೇ ಅಲ್ಲ, ಶಾಲೆಗಳು, ದೇವಸ್ಥಾನಗಳು ಮುಂತಾದುವು ಇರುವ ಕಡೆ ಅಂಗಡಿಗಳನ್ನು ದೂರ ತೆರೆಯಬೇಕೆಂದು ತಿಳಿಸಿದೆ.

ಮತ್ತೆ ಕೆಲವರು ಇದನ್ನು ಹರಿಜನ ಕೇರಿಯಲ್ಲೇ ತಯಾರು ಮಾಡುತ್ತಾರೆಂದು ಹೇಳುತ್ತಿದ್ದಾರೆ, ಆದರೆ ಈ ವಿಚಾರಗಳು ಮಾನ್ಯ ಸದಸ್ಯರಿಗೆ ಸರಿಯಾಗಿ ತಿಳಿದಿದೆಯೋ ಇಲ್ಲವೋ ಗೊತ್ತಿಲ್ಲ. ಅಂತೆದೆ ಮಾಡುವವರು ಮಾಡೇ ಮಾಡುತ್ತಾರೆ. ಇದನ್ನು ಅನೇಕ ಲಂಬಾಣಿ ತಾಂಡಗಳಲ್ಲೂ ಮಾಡುತ್ತಾರೆ ಈಗ ಈ ೨೦ನೇ ಶತಮಾನದಲ್ಲಿ—೧೯೭೪ರಲ್ಲಿ ಎಲ್ಲಾ ವರ್ಗದವರೂ ಎಲ್ಲಾ ಜಾತಿಯವರೂ ಇದನ್ನು ಕುಡಿಯುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು—ಕಾಂಗ್ರೆಸ್ಸಿನವರು ಗಾಂಧೀವಾದಿಗಳು ಶೇಂದಿವಾದಿಗಳಲ್ಲ. ಆದುದರಿಂದ ಆ ತಮಿಳುನಾಡಿನಲ್ಲಿ ಇದನ್ನು ತಪ್ಪಿಸಿರುವ ಮಟ್ಟಿಗಾದರೂ ಇಲ್ಲಿ ತಪ್ಪಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ನಾನು ಶ್ರೀ ಕೋಣಂದೂರು ಲಿಂಗಪ್ಪನವರು ಇದ್ದಂದನ್ನ ಇದ್ದಂತೆಯೇ ಹೇಳತಕ್ಕ ಸತ್ಯವಾದಿಗಳೆಂದು ಭಾವಿಸಿದ್ದೇನೆ. ಅವರನ್ನು ನಾನು ಈಗಲೂ ಕೂಡ ಆ ತಮಿಳುನಾಡಿಗೆ ಕಳುಹಿಸಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಅವರು ಅಲ್ಲಿಗೆ ಹೋಗಿ ಅಲ್ಲಿ ಏನು ಸತ್ಯಾಂಶ ನಡೆಯುತ್ತಿದೆ ಎಂಬುದನ್ನು ಅಲ್ಲಿ ೧೫ ದಿನಗಳು ಇದ್ದು ವಿದ್ಯಮಾನಗಳನ್ನು ಸ್ಟಡಿಮಾಡಿ ಕೊಂಡು ಬಂದು ತಿಳಿಸಲಿ. ಅದನ್ನು ನಾನು ಅವರು ಹೇಳಿದಂತೆ ಮಾಡುವುದಕ್ಕೆ ಸಿದ್ಧ.

ಶ್ರೀ ಎಂ, ಬಿ. ರಾಮಸ್ವಾಮಿ.—ಈಗ ಈ ಹೆಂಡಕ್ಕೆ ಅನೇಕ ಕೆಮಿಕಲ್ಸ್‌ನ್ನು ಸೇರಿಸುವುದರಿಂದ ಜನರ ಆರೋಗ್ಯ ಕೆಟ್ಟು ಅವರು ಅನೇಕ ರೋಗರುಜಿನಗಳಿಗೆ ತುತ್ತಾಗುತ್ತಿದ್ದಾರೆಂದು ಈಗತಾನೆ ಇಲ್ಲಿ ಪ್ರಸ್ತಾಪ ಮಾಡೋಣವಾಯಿತು. ಅದನ್ನು ತಪ್ಪಿಸುವುದಕ್ಕೆ ಹಾಲಿ ಈ ಬೀರು—ಬ್ರಾಂದ್ರಿಗಳ ಏನು ಸೀಲಾದ ಬಾಟಲುಗಳಲ್ಲಿ ಮಾರಾಟವಾಗುತ್ತಿವೆ. ಹಾಗೆ ಇದನ್ನೂ ಸೀಲಾದ ಬಾಟಲುಗಳಲ್ಲಿ ಮಾರಾಟಿ ಮಾಡುವಂತೆ ಮಾಡುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇದಕ್ಕಾಗಲೇ ಉತ್ತರವನ್ನು ಹೇಳಿದ್ದೇನೆ.

ಶ್ರೀ ಜಿ. ರಾಮೇಗೌಡ.—ಟಾಡೀ ಕಂಟ್ರಾಕ್ಟರುಗಳು ಶೇಂದಿಯನ್ನು ಮರದಿಂದ ಇಳಿಸಿದ ಕೂಡಲೇ ಅದನ್ನು ನೇರವಾಗಿ ತಮ್ಮ ಸ್ವಂತ ಫ್ಯಾಕ್ಟರಿಗಳಿಗೆ ತೆಗೆದುಕೊಂಡು ಹೋಗಿ ಅಲ್ಲಿ ಅದಕ್ಕೆ ಅನೇಕ ವಸ್ತುಗಳನ್ನು ಕಲಬೆರಕೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಅಂಥಾದ್ದನ್ನು ತಡೆಗಟ್ಟಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅಂಥಾದ್ದು ಎಲ್ಲಾದರೂ ನಡೆಯುತ್ತಿದ್ದರೆ ತಾವು ತಿಳಿಸಿದರೆ ಅದನ್ನು ತ ಪ್ಪಿಸುವುದಕ್ಕೆ ನಾನು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

SRI B. B. SAYANAK.—The Government is very particular about income from excise. In view of the fact that the students world including girls and children below 10 years are consuming liquor will the Government fix an age-limit.

SRI D. DEVARAJ URS—I have no objection to put age limit. But is it workable or practicable is a point. Liquor could be bought by elders and taken home for use by others also.

ಶ್ರೀ ಟಿ. ಆರ್. ಶಾಮಣ್ಣ.—ಶೇಂದಿ ಅಂಗಡಿಗಳ ಮುಂದೆ ಬಹಳ ಗಲೀಜಿರುವ ಜಾಗಗಳಲ್ಲಿ ಚಾಕಣ ಅಂಗಡಿ ಇಟ್ಟಿರುತ್ತಾರೆ ಇದನ್ನು ತಪ್ಪಿಸತಕ್ಕ ಬಗ್ಗೆ, ಮತ್ತು ಶೇಂದಿಯನ್ನು ಹನಿಗೆ ಅಳೆದು ಕೊಡುವಾಗ ಕಡಮೆ ಅಳೆದುಕೊಡುವುದನ್ನು ತಪ್ಪಿಸುವುದರ ಬಗ್ಗೆ, ಸ್ಲಂ ಏರಿಯಾದಲ್ಲಿ ಇಲಿಸಿಟ್ ಅರೆಕ್ ತಯಾರಿಸುತಿ ರುವುದನ್ನು ತಪ್ಪಿಸುವುದಕ್ಕೆ ಕೂಡಲೇ ಕ್ರಮಗಳನ್ನು ಕೈಗೊಳ್ಳುತ್ತಾರೆಯೇ.

ಶ್ರೀ ಡಿ. ದೇವರಾಜ ಅರಸ್.—ಶ್ರೀ ಶಾಮಣ್ಣನವರು ವಿಷಯಗಳನ್ನು ಚೆನ್ನಾಗಿ ಅಭ್ಯಾಸಮಾಡಿ ದ್ದಾರೆ ಬಹಳ ವಿಷಯಗಳನ್ನು ತಿಳಿದುಕೊಂಡಿದ್ದಾರೆ, ಅಳತೆಯನ್ನು ಕಡಮೆ ಕೊಡುತ್ತಿದ್ದಾರೆಂದು ಹೇಳಿದರು. ಶೇಂದಿಯನ್ನು ಮಾರಾಟ ಮಾಡತಕ್ಕ ಬಗ್ಗೆ ಒಂದು ಟೇಬಲ್ಲನ್ನು ಇಟ್ಟುಕೊಂಡು ಅದರ ಮೇಲೆ ಅದನ್ನು ಅಳೆದುಕೊಡಬೇಕೆಂದೂ—ಅಂದರೆ ಒಬ್ಬ ಮನುಷ್ಯ ಎದುರಿಗೆ ನಿಂತುಕೊಂಡರೆ ಆತನಿಗೆ ಅಳೆದು ಕೊಡುವುದು ಸರಿಯಾಗಿ ಕಾಣಬೇಕು, ಆ ಪ್ರಮಾಣದಲ್ಲಿ ಒಂದು ಟೇಬಲ್ಲನ್ನು ಇಟ್ಟು ಅದರಮೇಲೆ ಅಳೆದು ಕೊಡಬೇಕೆಂಬ ಒಂದು ನೇಮ ಹಿಂದಿನಿಂದಲೂ ಇತ್ತು, ಆದರೆ ಅದು ಜಾರಿಯಲ್ಲೇ ಇರಲಿಲ್ಲ. ಆದನ್ನೆ ಲ್ಲಾನಾವು ಹಿಂದಿನ ವರ್ಷ ಕಂಡು ಹಿಡಿದು ಅದನ್ನು ನಿಯಮದ ಪ್ರಕಾರವೇ ಅಳೆದು ಕೊಡಬೇಕೆಂದು ಕಡ್ಡಾಯ ಮಾಡಿ ಕಡಮೆ ಅಳತೆ ಕೊಡುತ್ತಿದ್ದನ್ನು ತಪ್ಪಿಸಿದ್ದೇವೆ. ರೂಲನ್ನು ಈಗ ನಾವು ಕಟ್ಟುನಿಟ್ಟಾಗಿ ಜಾರಿ ಮಾಡುತ್ತಿದ್ದೇವೆ. ಐಗ ಅಳತೆಯಲ್ಲಿ ಮೋಸಮಾಡುವುದು ಬಹಳ ಮಟ್ಟಿಗೆ ತಪ್ಪಿದೆ

ಶ್ರೀ ಟಿ. ಆರ್. ಶಾಮಣ್ಣ.—ನನಗೆ ಕೆಲವರು ಬಂದು ಅಸೆಂಬ್ಲಿಯಲ್ಲಿ ನೀವು ಈ ಪ್ರಶ್ನೆಯನ್ನೆ ಎತ್ತಬೇಡಿ, ನಿಮಗೆಷ್ಟು ಬೇಕಾದರೂ ಹಣ ಕೊಡುತ್ತೇವೆಂದು ಹೇಳಿದರು. ಅದಕ್ಕೆ ನಾನು ಇದನ್ನು ಇಲ್ಲಿ ಹೇಳಬೇಕಾಯಿತು.

ಶ್ರೀ ಡಿ. ದೇವರಾಜ ಅರಸ್.—ತಾವು ನನಗೆ ಈ ವಿಷಯಗಳನ್ನು ತಿಳಿಸಿದ್ದು ಬಹಳ ಸಂತೋಷ. ನನಗೆ ಈ ವಿಷಯಗಳು ಗೊತ್ತಿರಲಿಲ್ಲ, ಇದನ್ನು ನಾನು ಕೂಲಂಕಷವಾಗಿ ಪರಿಶೀಲಿಸುವುದಕ್ಕೆ ತಿಳಿಸುತ್ತೇನೆ. ತಾವು ನನಗೆ ಆ ವಿಚಾರಗಳನ್ನು ಕಾನ್‌ಫಿಡೆಷನ್‌ಯಲ್ಲಾಗಿ ಬಂದು ತಿಳಿಸಿ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡುತ್ತೇನೆ. ಆದರೆ ಇನ್ನು ಆ ಶೇಂದಿ ಅಂಗಡಿಗಳು ಎಲ್ಲೆಲ್ಲಿ ಇರುತ್ತವೋ ಅಲ್ಲೆಲ್ಲಾ ಈ ಮಾಂಸವನ್ನು ಹುರಿದು ಮಾರಾಟ ಮಾಡತಕ್ಕ ಅಂಗಡಿಗಳಿದ್ದೇ ಇರುತ್ತವೆ. ಅಂಥಾದನ್ನು ತಪ್ಪಿಸತಕ್ಕ ಬಗ್ಗೆ ಕಾರ್ಪೊರೇಷನ್ನಿನವರು ಕೂಡ ಪ್ರಯತ್ನ ಮಾಡಬೇಕು. ಮೊನ್ನೆ ಎಲ್ಲೋ ಒಂದು ಕಡೆ ಕಾರ್ಪೊರೇಷನ್ನಿನವರು ಇದನ್ನು ತಪ್ಪಿಸತಕ್ಕ ಬಗ್ಗೆ ಪ್ರಯತ್ನ ಮಾಡಲು ಹೋಗಿದಾಗ ಜನರು ಅವರಮೇಲೆ ತಿರುಗಿಬಿದ್ದರೆಂದು ಪತ್ರಿಕೆಯಲ್ಲಿ ವರದಿಯಾಗಿತ್ತು. ವೆಸ್ಟೆಡ್ ಇಂಟರೆಸ್ ಡೆವಲಪ್ ಆಗಿದೆ. ನಾನು ಮಾನ್ಯ ಶ್ರೀ ಶಾಮಣ್ಣನವರ ಮೂಲಕ ಕಾರ್ಪೊರೇಷನ್ನಿಗೆ ಸರ್ಕಾರವ ಪರವಾಗಿ ಪೂರ್ಣಬೆಂಬಲವನ್ನು ಕೊಡುತ್ತೇನೆ. ಅದಕ್ಕೆ ಮಾನ್ಯ ಸದಸ್ಯರೂ ಸಹ ಪೂರ್ಣ ಬೆಂಬಲವನ್ನು ಕೊಡಬೇಕು. ಯಾರೇ ಆಗಲಿ ಇದರ ಬಗ್ಗೆ ಇನ್‌ಫ್ಲ್ಯೂಯೆನ್ಸ್ ಮಾಡುವುದಕ್ಕೆ ಬಂದರೂ ಅದಕ್ಕೆ ಮಾನ್ಯ ಸದಸ್ಯರು ಗಮನಕೊಡದೆ ಮಾನ್ಯ ಸದಸ್ಯರು ಸರ್ಕಾರಕ್ಕೆ ವಿಷಯವನ್ನು ಖಚಿತವಾಗಿತಿಳಿಸಿದರೆ. ಸರ್ಕಾರ ಅದಕ್ಕೆ ಪೂರ್ಣ ಬೆಂಬಲ ಕೊಟ್ಟು ಸೂಕ್ತ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಹಾಯವಾಗುತ್ತದೆ.

9-00 A.M

ಶ್ರೀ ಬಿ. ಬೈರಪ್ಪಾಜಿ.—ಈಗ ಒಂದು ವರ್ಷದಲ್ಲಿ ೭ ಕೋಟಿ ರೂಪಾಯಿಗಳಷ್ಟು ಆದಾಯ ಜಾಸ್ತಿ ಬಂದಿದೆಯೆಂದು ಹೇಳುತ್ತೀರಿ. ನಾವು ಬರೀ ಆದಾಯವನ್ನೇ ನೋಡಿಕೊಂಡು ಹೋಗುತ್ತಿದ್ದರೆ, ಜನಗಳ

(ಶ್ರೀ ಬಿ. ಬೈರಪ್ಪಾಜಿ)

ಆರ್ಥಿಕ ಮತ್ತು ನೈತಿಕ ಮಟ್ಟ ಇಳಿಯುತ್ತಿರುವ ಬಗ್ಗೆ ಗಮನ ಕೊಡದೆ ಹೋದರೆ ಹೇಗೆ ? ಇದರಿಂದ ಒಂದರಡು ವರ್ಷಗಳಲ್ಲಿ ಕುಡಿಯುವವರು ಇಲ್ಲದೇ ಇರುವ ಪರಿಸ್ಥಿತಿ ಉದ್ಭವವಾಗುತ್ತದೆ. ಇದರಿಂದ ಕುಡಿಯದೇ ಇರುವವರೂ ಕೂಡ ಈ ದೇಶದಲ್ಲಿ ತೆರಿಗೆ ಕೊಡುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ತಮಿಳುನಾಡು ಸರ್ಕಾರ ಮಾಡಿರುವ ರೀತಿಯಲ್ಲಿ ಕಡ್ಡಾಯವಾಗಿ ಪಾನನಿರೋಧವನ್ನು ಇಡೀ ದೇಶದಲ್ಲಿ ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಈಗಲಾದರೂ ಯೋಚನೆ ಮಾಡುತ್ತೀರಾ ?

(ಉತ್ತರವಿಲ್ಲ)

APPOINTMENT MADE IN CONNECTION WITH KALI PROJECT

8. SRI V. M. GHADI.—(Haliyal)

Will the Minister for public Works and Electricity be pleased to state.

(*a*) the number of Clerks, Assitant Engineers, Junior Engineers, Supervisors, Time keepers (S. S. L. C. Passed) and Driver (Jeep and Trucks) appointed since the commencement of Kali Project at Ambikanagar and Supa

(*b*) of them, the number of person from Haliyal and Supa Taluks appointed.

(*c*) whether the rehablitation Committee has to recommeneded to Government to give first perference to the people of Haliyal and Supa

SRI H. M. CHANNABASAPPA.—(Minister for Public and Works Elecricity.

(*a*) 1. Group Engineers (Assitont Engineers) 20
2. Engineers (Junior Engineers) 52
3. Assitants (Clerks) 174
4. Managers (Supervisiors) 209
5. Drivers (Under work charged establishment) 75
6. Time keepers Nil

(*b*)

Sl. No.	Name of Appointment	From Haliyal Taluk	From Supa Taluk
1	2	3	4
1.	Assistants	6	6
2.	Managers	3	...
3.	Drivers	3	...

(*c*) No.